1035 ಶ್ರೀ ಮಂಜು ಎ. : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವೆ ನಂ–21 ಹೊಸಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, 200 ಎಕರೆ 38 ಗುಂಟೆ ಸರ್ಕಾರಿ ಗೋ–ಮಾಳ ಜಮೀನು ಆಗಿದ್ದು, ಇದರಲ್ಲಿ ಎಷ್ಟು ಎಕರೆ ಸರ್ಕಾರದ ವಶಕ್ಕೆ ತೆಗೆದುಕೊಂಡು ಹರಾಜು ಮಾಡಲಾಗಿದೆ;

ಆ) ಹಾಗಿದ್ದಲ್ಲಿ, ಸರ್ಕಾರಕ್ಕೆ ಬಂದ ಹಣವೆಷ್ಟು;

ಇ) ಇದರಲ್ಲಿ ಭಾಗವಹಿಸಿದ ಜನರೆಷ್ಟು; (ವಿವರ ನೀಡುವುದು);

ಈ) ಸರ್ವೆ ನಂ–161 ರಿಂದ 181 ವರೆಗೆ ಇರುವ ಸರ್ಕಾರಿ ಜಮೀನನ್ನು ಸರ್ಕಾರ ವಶಕ್ಕೆ ಪಡೆದಿದೆಯೇ, ಪಡೆಯದಿದ್ದಲ್ಲಿ ವಿಳಂಬಕ್ಕೆ ಕಾರಣವೇನು;

ಉ) 3 ವರ್ಷವಾಗಿದ್ದಾಗ್ಯೂ ಸರ್ಕಾರ ಏಕೆ ಕ್ರಮ ಕೈಗೊಳ್ಳಲಾಗಿಲ್ಲ.

ಊ) ಸದರಿ ಜಮೀನುಗಳ ಸಂಬಂಧ ಅಕ್ರಮ ದಾಖಲೆಗಳು ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಬಂದಿದ್ದಲ್ಲಿ, ಇದರಲ್ಲಿ ಭಾಗಿಯಾಗಿರುವ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ–21 ಸರ್ಕಾರಿ ಖರಾಬಾಗಿದ್ದು, ಆಕಾರ ಬಂದ್‌ನಂತೆ ಒಟ್ಟು ವಿಸ್ತೀರ್ಣ 108.18 ಎ/ಗು ಇರುತ್ತದೆ. 59.14 ಎ/ಗು ಒತ್ತುವರಿಯೆಂದು ಗುರುತಿಸಲಾಗಿದೆ. ಈ ಒತ್ತುವರಿ ಪೈಕಿ 42.21 ಎ/ಗು ಒತ್ತುವರಿಯನ್ನು ತೆರವುಗೊಳಿಸಿ ಹರಾಜು ಮಾಡಲಾಗಿದೆ.

ಆ) ತೆರವುಗೊಳಿಸಿದ ಜಮೀನಿನ ಪೈಕಿ ಬ್ಲಾಕ್–ಎ 32.14 ಎ/ಗು ಇದರ ಅಂತಿಮ ಬಿಡ್ ಮೊತ್ತ ರೂ. 36.50 ಕೋಟಿ ಆಗಿದ್ದು, ಈ ಪೈಕಿ ಶೇ. 25ರಷ್ಟು ಮೊತ್ತ ರೂ. 9,12,50,000/–ಗಳನ್ನು ಸರ್ಕಾರಕ್ಕೆ ಪಾವತಿಯಾಗಿದೆ. ಬ್ಲಾಕ್–ಡಿ ನಲ್ಲಿ 10.07 ಎ/ಗು ಜಮೀನು ಹರಾಜು ಮಾಡಿದ್ದು, ಈ ಹರಾಜನ್ನು ಸರ್ಕಾರ ತಿರಸ್ಕರಿಸಿದೆ.

ಇ) ಹರಾಜಿನಲ್ಲಿ 10 ಜನ ಭಾಗವಹಿಸಿರುತ್ತಾರೆ. ವಿವರ ಕೆಳಕಂಡಂತಿದೆ. (1) ಶ್ರೀ ಬಿ. ಪ್ರೇಮನಾಥರೆಡ್ಡಿ (2) ಶ್ರೀ ರಾಮಯ್ಯರೆಡ್ಡಿ (3) ಶ್ರೀ ಕೆ.ಎನ್.ನಾಗರಾಜು (4) ಶ್ರೀ ರವಿಕುಮಾರ್ (5) ಮೆ: ರೆಡ್ ಕಾರ್ಪೆಟ್

ಇನ್ ಫ್ರಾಸ್ಟ್ರಕ್ಚರ್ (6) ಶ್ರೀ ಬಿ.ಎಂ.ಮಹದೇವಪ್ಪ (7) ಎಂ.ವಿ.ಆರ್. ಸೆಕ್ಯೂರಿಟೀಸ್, ಲಿ. ಪರವಾಗಿ ಶ್ರೀ ಯೂಸೆಫ್ ಷರೀಫ್ (8) ಮೆ: ಓಂಕಾರೇಶ್ವರ ರಿಯಲಟರ್ಸ್ ಪ್ರೈವೇಟ್ ಲಿ. (9) ಅಸ್ಲಾಂ ಪಾಶ (10) ಮೆ: ತ್ರಿನಯನಿ ರಿಯಲಟರ್ಸ್

ಈ) ಹೊಸಹಳ್ಳಿ ಹಳೇ ಸ.ನಂ. 21 ಹೊಸ ಸ.ನಂ. 161 ರಿಂದ 181 ರಲ್ಲಿ 65.00 ಎಕರೆಗೆ ಸಂಬಂಧಿಸಿದಂತೆ, ಅಕ್ರಮ ದಾಖಲೆಗಳು ಸೃಷ್ಟಿಸಿರುವ ಬಗ್ಗೆ ವಿಶೇಷ ಜಿಲ್ಲಾಧಿಕಾರಿಗಳು (ಕಂದಾಯ) ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 136(3) ರ ಅಡಿಯಲ್ಲಿ ಪ್ರಕರಣ ವಿಚಾರಣೆ ನಡೆಯುತ್ತಿದೆ. ವಿಚಾರಣೆಯನ್ನು ತ್ವರಿತವಾಗಿ ಇತ್ಯರ್ಥಪಡಿಸಿ ಕ್ರಮ ಜರುಗಿಸಲಾಗುವುದು.

ಉ) ಮೇಲಿನಂತೆ ಕ್ರಮ ವಹಿಸಿರುವುದರಿಂದ ಉದ್ಭವಿಸುವುದಿಲ್ಲ.

ಊ) ಹೌದು.

ಋ) ಅಕ್ರಮ ದಾಖಲೆಗಳು ಯಾವ ಅವಧಿಯಲ್ಲಿ ನಡೆದಿದೆ ಯಾರು ಭಾಗಿಯಾಗಿದ್ದಾರೆ ಎನ್ನುವ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

911 ಶ್ರೀ ಮಂಜುನಾಥ್. ಹೆಚ್.ಪಿ (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಕೃತಿ ವಿಕೋಪದಿಂದ ಆದ ಅನಾಹುತಗಳಿಗೆ ಅಂದರೆ ನದಿ ಪ್ರವಾಹ, ಆಕಸ್ಮಿಕ ಬೆಂಕಿ, ಅತಿಯಾದ ಮಳೆ... ಇತ್ಯಾದಿಯಿಂದ ರೈತರು ಹಾಗೂ ಸಾರ್ವಜನಿಕರಿಗೆ ಆದ ನಷ್ಟಗಳಿಗೆ ನೀಡಲಾಗುವ ಪರಿಹಾರ ಧನ ಕುರಿತು ನಿರ್ಧಾರ ಕೈಗೊಳ್ಳುವಾಗ ಅನುಸರಿಸುವ ಮಾನದಂಡವೇನು;

ಆ) ಇಂತಿಂತಹ ಪ್ರಕರಣಗಳಿಗೆ ಸರ್ಕಾರದಿಂದ ಇಂತಿಂತಹ ಪರಿಹಾರ ಹಣವೆಂದು ಹಾಗೂ ಇಂತಿಷ್ಟೆಂದು ನಿಗದಿ ಮಾಡಲಾಗಿದೆಯೇ; ಇದ್ದಲ್ಲಿ, ಅಂತಹವುಗಳ ವಿವರ ನೀಡುವುದು;

ಇ) ಪ್ರಕೃತಿ ವಿಕೋಪದಿಂದಾದಂತಹ ನಷ್ಟಕ್ಕೆ ರೈತರಿಗೆ ಸಿಗುತ್ತಿರುವ ಪರಿಹಾರ ಧನ ಹೂಡಿಕೆಗಿಂತ ಬಹಳ ಕಡಿಮೆಯಾಗಿರುವ ವಿಚಾರ ನಿಜವಲ್ಲವೇ; ಹಾಗಿದ್ದಲ್ಲಿ, ಪರಿಹಾರ ಹಣ ಹೆಚ್ಚಿಸುವ ಬಗ್ಗೆ ಪ್ರಸ್ತಾಪವೇನಾದರೂ ಸರ್ಕಾರದ ಮುಂದಿದೆಯೇ?